Support Price of Hybrid Jowar

250 SRI M. C. BASAPPA (Chamarajanagar)—Will the Minister for Labour, Small Scale Industries and Wakfs be pleased to state—

(a) whether Government had fixed the support price of Hybrid Jowar for the year 1979-80 and made arrangements for the purchase of the same;

(b) what was the rate fixed;

(c) whether the order is in force?

SRI C.M. IBRAHIM (Minister for Labour, Small Scale Industries and Wakfs) –

(a) No.

(b) Does not arise in view of reply to Clause (a).

(c) Does not arise in view of reply to Clause (a).

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಈ ವಿಚಾರದಲ್ಲಿ ನಾನು ಸಪ್ಲಿಮೆಂಟರಿ ಕೊಶ್ಚನ್ ಕೇಳುವುದಕ್ಕೆ ಮುಂಚೆ ನನ್ನ ಮೊದಲನೇ ಪ್ರಶ್ನೆಗೆ ತಾವು ಏನು ಉತ್ತರ ಕೊಟ್ಟಿದ್ದೀರಿ ಅದು ಸರಿಯಾಗಿ ಇದೆಯೇ ಅದು ಸರಿಯಾಗಿ ಇಲ್ಲದಿದ್ದರೆ ಡಿಪಾರ್ಟ್‌ಮೆಂಟ್‌ನವರಿಗೆ ಕಳಿಸಿ ವೆರಿಫೈ ಮಾಡಿ ಅದನ್ನು ಕರೆಕ್ಟ್ ಮಾಡುತ್ತೀರಾ ಎಂದು ಕೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಯಾವುದು?

ಶ್ರೀ ಎಂ. ಸಿ. ಬಸಪ್ಪ.—Whether Government had fixed the support price of Hybrid Jowar for the year 1979-80 and made arrangements for the purchase of the same ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ತಾವು ಫ್ಲ್ಯಾಟ್‌ಆಗಿ 'ನೋ' ಎಂದು ಹೇಳಿದ್ದೀರಿ. ಇದನ್ನು ನಿಮ್ಮ ಡಿಪಾರ್ಟ್‌ಮೆಂಟಿನವರಿಂದ ವೆರಿಫೈ ಮಾಡಿಸುತ್ತೀರಾ ಅಥವಾ ಇಲ್ಲಿ ಕೊಟ್ಟಿರತಕ್ಕಂಥ ಉತ್ತರ ಸರಿ ಎಂದು ಹೇಳುತ್ತೀರಾ?

ಶ್ರೀ ಸಿ. ಎಂ. ಇಬ್ರಾಹಿಂ.—ಈಗ ಹೈಬ್ರಿಡ್ ಜವಾರನ್ನು ಪ್ರೊಕ್ಯೂರ್‌ಮೆಂಟ್ ಮಾಡುವುದು ಬೇಡ ಎಂದು ನಾವು ತೀರ್ಮಾನಮಾಡಿಬಿಟ್ಟಿದ್ದೇವೆ. ಮುಂದಿನಸಾರಿ ಏನು ಪ್ರೊಕ್ಯೂರ್‌ಮೆಂಟ್ ಮಾಡುತ್ತಾರೆ ಅದಕ್ಕೆ ೯೫ರೂಪಾಯಿಗಳನ್ನು ಪ್ರೊಕ್ಯೂರ್‌ಮೆಂಟ್ ಪ್ರೈಸ್ ಎಂದು ಕೊಟ್ಟಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಮಾನ್ಯಮಂತ್ರಿಯವರು 'ನೋ' ಎಂದು ಹೇಳಿದ್ದಾರೆ. ಈ ಉತ್ತರ ಸರಿಯಾಗಿ ಇದೆಯೇ ಇಲ್ಲವೇ ಎಂಬುದನ್ನು ಅವರು ಡಿಪಾರ್ಟ್‌ಮೆಂಟಿನವರೊಡನೆ ವೆರಿಫೈ ಮಾಡಿ ಹೇಳಲಿ. ಅದಕ್ಕೆ ಅವರು ಟೈಮ್ ತೆಗೆದು ಕೊಳ್ಳಲಿ.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಹೈಬ್ರಿಡ್ ಜವಾರನ್ನು ಪ್ರೊಕ್ಯೂರ್‌ಮೆಂಟ್ ಮಾಡಬಾರದು ಎಂದು ಒಂದು ಡಿಸಿಷನ್ ಆಗಿದೆ. ಹಾಗೆ ಆಗಿರತಕ್ಕಂಥ್ಹ ಡಿಸಿಷನ್ ರೆಕಾರ್ಡ್‌ನಲ್ಲಿ ಇದೆ.

ಶ್ರೀ ಎಂ. ಸಿ. ಬಸಪ್ಪ.—ತಾವು ನನ್ನ ಪ್ರಶ್ನೆಗೆ ಉತ್ತರವಾಗಿ 'ನೋ' ಎಂದು ಹೇಳಿದ್ದೀರಿ. ಆ ಉತ್ತರ ಸರಿ ಇದೆಯೇ ಇಲ್ಲವೇ ಎಂಬುದನ್ನು ವೆರಿಫೈ ಮಾಡಿ ಹೇಳಿ.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಈ ಹೈಬ್ರಿಡ್ ಜವಾರ್ ವಿಚಾರದಲ್ಲಿ ಈಗ ಅದನ್ನು ಪ್ರೊಕ್ಯೂರ್‌ಮೆಂಟ್ ಮಾಡಬಾರದು ಎಂದು ತೀರ್ಮಾನವಾಗಿದೆ. ಮುಂದಿನಸಾರಿ ಅದನ್ನು ಏನು ಪ್ರೊಕ್ಯೂರ್‌ಮೆಂಟ್ ಮಾಡುತ್ತಾರೆ ಅದಕ್ಕೆ ನಾವು ೯೫ರೂಪಾಯಿಗಳ ದರವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು.—೧೯೭೯-೮೦ನೇ ಸಾಲಿಗೆ ಹೈಬ್ರಿಡ್ ಜೋಳಕ್ಕೆ ಎಷ್ಟು ಸಪೋರ್ಟ್ ಪ್ರೈಸ್‌ಫಿಕ್ಸ್ ಮಾಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದಕ್ಕೆ ತಾವು ಉತ್ತರ ಹೇಳಿ.

ಶ್ರೀ ಎಂ. ಸಿ. ಬಸಪ್ಪ.—ನಾನು, ೧೯೭೯-೮೦ನೆ ಸಾಲಿಗೆ ಸರ್ಕಾರದವರು ಹೈಬ್ರಿಡ್ ಜೋಳದ ಬೆಂಬಲ ಬೆಲೆಯನ್ನು ನಿಗದಿಪಡಿಸಿರುವರೆ ಹಾಗೂ ಸದರೀ ಜೋಳವನ್ನು ಖರೀದಿ ಮಾಡಿಕೊಳ್ಳಲು ವ್ಯವಸ್ಥೆ ಮಾಡಿರುವರೆ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ತಾವು ನೋ ಎಂದು ಉತ್ತರ ಹೇಳಿದ್ದೀರಿ. ಈ ಉತ್ತರ ಸರಿಯಾಗಿದೆಯೇ ಎಂದು ವೆರಿಫೈ ಮಾಡಿಸಿ.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ಅದನ್ನು ವೆರಿಫೈ ಮಾಡಿಸುತ್ತೇನೆ.

ಶ್ರೀ ಎಂ. ಸಿ. ಬಸಪ್ಪ.—ನನ್ನ ಪ್ರಶ್ನೆ ಅರ್ಧ ಆಗಿದೆ. ಅದಕ್ಕೆ ಮಾನ್ಯ ಆಹಾರ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಸಿ. ಎಂ. ಇಬ್ರಾಹಿಂ.—ನಾಳೆ ಹೇಳುತ್ತೇನೆ.

ಶ್ರೀ ಎ. ಜಿ. ಕೊಡಗಿ.—ಸದನದ ಮುಂದೆ ಪ್ರಶ್ನೆ ಬಂದಾಗ ಮಂತ್ರಿಗಳು ಅಧಿಕಾರಿಗಳ ಹತ್ತಿರ ಹೋಗಿ ಕೇಳಿ ಉತ್ತರ ಕೊಡುತ್ತಾರೆ ಇಲ್ಲವಾದರೆ ನಾಳೆ ಕೊಡುತ್ತೇನೆಂದು ಹೇಳುತ್ತಾರೆ. ಇದು ಸರಿಯಾದ ಸಂಪ್ರದಾಯವಲ್ಲ. ಆದ್ದರಿಂದ, ತಾವು ದಯವಿಟ್ಟು ಅವರಿಗೆ ತಿಳಿಸಬೇಕು. ಕೇವಲೊಮ್ಮೆ ಪ್ರಶ್ನೆ ಕೇಳಿ ೩ ತಿಂಗಳಾದರೂ ಉತ್ತರ ಬರುವುದಿಲ್ಲ. ಕೇಳಿದ ಪ್ರಶ್ನೆಗೆ ಸಮಂಜಸವಾದ ಉತ್ತರವನ್ನು ಕೊಡಲಿಕ್ಕೆ ಆಗದಿದ್ದರೆ ಅದೂ ಕೂಡ ಒಳ್ಳೆಯ ಸಂಪ್ರದಾಯವಾಗುವುದಿಲ್ಲ.

ಅಧ್ಯಕ್ಷರು.—ಇದನ್ನು ನಾಳೆ ಅಂಜೆಡಾದಲ್ಲಿ ಸೇರಿಸಲಾಗುವುದು.

ಎಸ್. ಆರ್. ಬೊಮ್ಮಾಯಿ.—ಸರ್ಕಾರಿ ಆಜ್ಞೆ ಆಗಿದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ಇಲ್ಲವೆಂದು ಹೇಳಿರುವುದು ಸರಿಯಲ್ಲ. ಸರ್ಕಾರಿ ಆಜ್ಞೆ ಆಗಿದೆ. ನಾವು ಒತ್ತಾಯ ಮಾಡಿದ ಮೇಲೆ ಸ್ವಲ್ಪ ಪ್ರೊಕ್ಯೂರ್‌ಮೆಂಟ್ ಮಾಡಿದ್ದಾರೆ. ಸರ್ಕಾರಿ ಆಜ್ಞೆ ಆಗಿಲ್ಲವೆಂದು ಹೇಳಂವುದು ಸರಿಯಲ್ಲ. ಆದ್ದರಿಂದ ಸರಿಯಾಗಿ ತಿಳಿದುಕೊಂಡು ಉತ್ತರ ಕೊಡುವುದು ಒಳ್ಳೆಯದು.

ಶ್ರೀ ಸಿ. ಎಂ. ಇಬ್ರಾಹಿಂ.—ಸರ್ಕಾರಿ ಆಜ್ಞೆ ಆಗಿಲ್ಲವೆಂದು ಹೇಳಿಲ್ಲ. ಆಜ್ಞೆ ಆಗಿದ್ದನ್ನು ಮತ್ತೆ ಆ ರೀತಿ ಮಾಡಬಾರದೆಂದು ನಿಲ್ಲಿಸಿದ್ದೇವೆ. ಅದು ಮಾನ್ಯ ಸದಸ್ಯರಿಗೆ ಕನ್‌ಫ್ಯೂಸ್ ಆಗಿದೆ.

ಶ್ರೀ ಎಂ. ಸಿ. ಬಸಪ್ಪ. ಮಾನ್ಯ ಮಂತ್ರಿಗಳು ಹೇಳುವ ಹಾಗೆ ನನಗೇನು ಕನ್‌ಫ್ಯೂಸ್ ಆಗಿಲ್ಲ ಈ ಪ್ರಶ್ನೆಗೆ ನಾಳೆ ಉತ್ತರ ಹೇಳುವ ಅವಶ್ಯಕತೆ ಇಲ್ಲ. ನನ್ನನ್ನು ಕನ್‌ಫ್ಯೂಸ್ ಮಾಡುವುದು ಬೇಡ. I am very clear on this point. My question is whether the Government had fixed the support price of Hybrid Jowar for the year 1979–80 and made arrangements for the purchase of the same. Your answer is, 'No' please stick to your answer.

MR. SPEAKER. –I Will withhold this question. It Will be taken up tomorrow.

SRI C. M. IBRAHIM.—I shall give the complete reply tomorrow.

MR. SPEAKER.—I withheld this question and I shall include it in tomorrow list.

SRI M. C. BASAPPA.—The Government should not mislead this House unnecessarily. They have got an army of Officers they have no business to mislead this House, they should have given correct information to this House.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಎಲ್ಲಾ ಸರಿಯಾಗಿ ವೆರಿಫೈ ಮಾಡಿ ಕೊಡಬೇಕು, ಭಯ ಭಕ್ತಿಯಿಂದ ಉತ್ತರ ಕೊಡಬೇಕು. ಇಲ್ಲದಿದ್ದರೆ ತುಂಬಾ ಕಷ್ಟವಾಗುತ್ತದೆ.